**ಸಾಕ್ಷಿಯನ್ನು ದಿನಾಂಕ 07-10-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಎಲ್.ಹೆಚ್. ವಕೀಲರಿಂದಃ**

ನನ್ನ ತಂದೆ ಇಮಾಮ್ ಸಾಬ ಅವರ ತಂದೆಗೆ ಒಬ್ಬನೇ ಮಗನಿದ್ದು ಅವರಿಗೆ ಅಣ್ಣ-ತಮ್ಮಂದಿರಿಲ್ಲ. ದಾವಾ ಜಮೀನುಗಳು ನನ್ನ ತಂದೆಗೆ ನನ್ನ ಅಜ್ಜ ಮೊದಿನ್ ಸಾಬನಿಂದ ಬಂತಿತ್ತು ಎಂದರೆ ಸರಿ. ನನ್ನ ಅಜ್ಜ ತೀರಿಕೊಂಡ ಬಳಿಕ ದಾವಾ ಜಮೀನುಗಳನ್ನು ನನ್ನ ತಂದೆ-ತಾಯಿಯೇ ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಗೆ ನಾನು ಮತ್ತು ಈ ದಾವೆಯ ವಾದಿ ಹಾಗೂ 1 ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರು ಮಕ್ಕಳು ಅಥವಾ ವಾರಸುದಾರರು ಇಲ್ಲ ಎಂದರೆ ಸರಿ. ನನ್ನ ತಂದೆ-ತಾಯಿ ಬದುಕಿದ್ದಾಗ ದಾವಾ ಸ್ವತ್ತಿನ ಉತ್ಪನ್ನಗಳನ್ನು ನನಗೆ ಮತ್ತು ಈ ದಾವೆಯ ವಾದಿ ಹಾಗೂ 1 ನೇ ಪ್ರತಿವಾದಿಗೆ ಹಂಚುತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿ ಬದುಕಿದ್ದಾಗ ದಾವಾ ಸ್ವತ್ತಿನ ಉತ್ಪನ್ನಗಳನ್ನು ನನಗೆ ಮತ್ತು ಈ ದಾವೆಯ ವಾದಿ ಹಾಗೂ 1 ನೇ ಪ್ರತಿವಾದಿಗೆ ಹಂಚುತಿದ್ದರು ಸಹ ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಿಮ್ಮ ಯಾವ ಊರಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸಾಕ್ಷಿ ನನ್ನ ಗಂಡ ತಾಂಡೂರಿನ ಬಳಿ ಇರುವ ಸಂಗ್ಯಾ ಕೆ. ಗ್ರಾಮದ ವಾಸಿಯಿದ್ದು ಅವರನ್ನು ನಮ್ಮ ಮನೆ ಅಳಿಯನನ್ನಾಗಿ ತರಲಾಗಿದೆ ಎನ್ನುತ್ತಾರೆ. ನನ್ನ ಮದುವೆಯಾಗಿ 40 ವರ್ಷ ಆಗಿರಬಹುದು. ನನ್ನ ಗಂಡನನ್ನು ಮನೆ ಅಳಿತನಕ್ಕೆ ತಂದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನನ್ನ ತಂದೆ-ತಾಯಿ ನನ್ನ ಗಂಡನನ್ನು ಮನೆ ಅಳಿತನಕ್ಕೆ ಪಡೆದುಕೊಂಡು ಅವರಿಗೆ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ. ನಿಮ್ಮ ಗಂಡನನ್ನು ಮನೆ ಅಳಿತನಕ್ಕೆ ಇಟ್ಟುಕೊಳ್ಳುವ ಮೊದಲು ನಿಮ್ಮ ತಂದೆ-ತಾಯಿ ವಾದಿ ಮತ್ತು 1 ನೇ ಪ್ರತಿವಾದಿಯರನ್ನು ಕೇಳಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಅವರ ಸಮಕ್ಷಮದಲ್ಲೆ ಮದುವೆ ಮಾಡಿದ್ದಾರೆ ಎನ್ನುತ್ತಾರೆ. ನಾನು ಮದುವೆಯಾದ ದಿನದಿಂದ ಇಲ್ಲಿಯವರೆಗೆ ನನ್ನ ಗಂಡನ ಮನೆ ಇರುವ ಸಂಗ್ಯಾ ಕೆ. ಗ್ರಾಮದಲ್ಲೆ ವಾಸವಿದ್ದರು ಸಹ ನನ್ನ ಗಂಡನನ್ನು ಮನೆ ಅಳಿಯನನ್ನಾಗಿ ಮಾಡಿಕೊಳ್ಳಲಾಗಿತ್ತು ಎನ್ನುವುದು ಸರಿಯಲ್ಲ.

ನಾನು ಚಿತ್ರಸಾಲ ಗ್ರಾಮದಲ್ಲಿ ವಾಸವಿದ್ದೇನೆ ಎಂಬುದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೇನೆ. 1 ನೇ ಪ್ರತಿವಾದಿಗೆ ಬೇಬಿ ಎಂಬ ಮೊಮ್ಮಗಳಿದ್ದಾಳೆ ಎಂದರೆ ಸರಿ. ಸದರಿ

ಬೇಬಿಯನ್ನು ನನ್ನ ಮಗನಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ನನ್ನ ತಂದೆ ಆರೋಗ್ಯದಿಂದ ಇದ್ದಾಗ ಮತ್ತು ಅಕಾಲಿಕ ಮರಣ ಹೊಂದಿದ್ದರು ಎಂದರೆ ಸರಿ.

ವಾದಿ ಚಿತ್ರಸಾಲ ಗ್ರಾಮಕ್ಕೆ ಹತ್ತಿರದಲ್ಲಿರುವ ನಿಡಗುಂದಾದಲ್ಲಿ ವಾಸವಿದ್ದಾಳೆ ಎಂದರೆ ಸರಿ. ವಾದಿ ಪ್ರತಿದಿನ ನಿಡಗುಂದಾ ಗ್ರಾಮಕ್ಕೆ ಬಂದು ಹೋಗುತ್ತಾಳೆ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ ವಾದಿ ನನ್ನ ತಂದೆ ಮನೆಗೆ ಪ್ರತಿನಿತ್ಯ ಬಂದು ಹೋಗುತ್ತಿದ್ದರಿಂದ ಆಕೆ ಉಳುದುಕೊಳ್ಳುವ ಸುಲುವಾಗಿ ನನ್ನ ತಂದೆ ಒಂದು ಕೋಣೆಯನ್ನು ಆಕೆಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ವಾದಿ ಈಗಲೂ ಆಕೆ ತಂದೆ ಮನೆಗೆ ಹೋದಾಗ ಅದೇ ಕೋಣೆಯಲ್ಲಿ ಉಳಿದುಕೊಳ್ಳುತ್ತಾಳೆ ಎನ್ನುವುದು ಸರಿಯಲ್ಲ.

ನನ್ನ ತಂದೆ ತೀರಿಕೊಳ್ಳುವಾಗ ಅವರಿಗೆ ಅಂದಾಜು 94 ವರ್ಷ ವಯಸ್ಸಾಗಿತ್ತು. ನಿಡಿ-1 ರ ಮೃತ್ಯು ಪತ್ರವನ್ನು ನನ್ನ ತಂದೆ ಚಿಂಚೋಳಿಗೆ ಬಂದು ಬರೆಸಿಕೊಟ್ಟಿದ್ದರು. ನಿಡಿ-1 ರ ದಾಖಲೆಯನ್ನು ಬರೆಯಲು ಛಾಪಾ ಕಾಗದವನ್ನು ನನ್ನ ತಂದೆಯೇ ಖರೀದಿ ಮಾಡಿದ್ದರು. ಸದರಿ ಛಾಪಾ ಕಾಗದವನ್ನು ಖರೀದಿ ಮಾಡಿದ ದಿನವೇ ನಿಡಿ-1 ರ ದಾಖಲೆಯನ್ನು ಅದರಲ್ಲಿ ಬರೆಯಲಾಗಿತ್ತು. ನನ್ನ ತಂದೆ ನಿಡಿ-1 ರ ದಾಖಲೆ ಬರೆಸುವ ಸಲುವಾಗಿ ಚಿಂಚೋಳಿಗೆ ಯಾವತ್ತು ಬಂದಿಲ್ಲ ಬದಲಾಗಿ ನಾನು ಮತ್ತು ಇತರರು ಮನೆಯಲ್ಲೆ ನನ್ನ ತಂದೆಯ ಹೆಬ್ಬೆಟ್ಟಿನ ಗುರುತನ್ನು ನಿಡಿ-1 ರ ದಾಖಲೆ ಮೇಲೆ ಪಡೆದು ಸದರಿ ದಾಖಲೆಯನ್ನು ಸೃಷ್ಠಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ವಾದಿಗೆ ದಕ್ಕಬೇಕಾದ ದಾವಾ ಸ್ವತ್ತುಗಳನ್ನು ಲಪಾಟಿಸುವ ಉದ್ದೇಶದಿಂದ ನಿಡಿ-1 ರ ದಾಖಲೆಯನ್ನು ಸೃಷ್ಠಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ನಿಡಿ-1 ರ ದಾಖಲೆಗೆ ಸಾಕ್ಷಿದಾರರಾಗಿ ಸಹಿ ಮಾಡಲು ನಮ್ಮ ಊರಿನಿಂದ ನಮ್ಮ ಜನಾಂಗದವರು ಯಾರು ಬಂದಿರಲಿಲ್ಲ.

ನಿಮ್ಮ ತಂದೆ ಜೀವಂತ ಇದ್ದಾಗ ವಾದಿ ಪಾಲು ವಿಭಾಗಕ್ಕಾಗಿ ನೋಟಿಸು ಕೊಟ್ಟ ಬಗ್ಗೆ ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ನನ್ನ ತಂದೆಯೇ ನನ್ನ ಬಳಿ ಹೇಳಿದ್ದರು ಎನ್ನುತ್ತಾರೆ. ಸದರಿ ನೋಟಿಸು ಬಂದ ನಂತರ ಸಲಹೆ ಪಡೆಯುವ ಸಲುವಾಗಿ ನಾನು ಸಹ ನಮ್ಮ ತಂದೆ ಜೊತೆ ವಕೀಲರ ಕಚೇರಿಗೆ ಹೋಗಿದ್ದೆ. ವಾದಿ ಕೊಟ್ಟಿದ್ದ ಸದರಿ ನೋಟಿಸನ್ನು ನಾವು ನಮ್ಮ ವಕೀಲರಿಗೆ ಕೊಟ್ಟಿದ್ದೇವೆ. ಸದರಿ ನೋಟಿಸನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನೋಟಿಸು ಬಂದ ದಿನವೇ ನನ್ನ ತಂದೆ ಸದರಿ ನೋಟಿಸು ತಲುಪಿರುವ ಬಗ್ಗೆ ನನಗೆ ಹೇಳಿದರು. ನೋಟಿಸು ತಲುಪಿದ ದಿನವೆ ನಾನು ಮತ್ತು ನನ್ನ

ತಂದೆ ವಕೀಲರ ಕಚೇರಿಗೆ ಬಂದಿದ್ದೇವು. ವಾದಿ ಯಾವುದೇ ನೋಟಿಸು ಕೊಟ್ಟಿಲ್ಲ ಮತ್ತು ನಿಡಿ-2 ರ ಮರು ಉತ್ತರ ನೋಟಿಸನ್ನು ಸೃಷ್ಠಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಪಾಲು ಕೊಡುವುದನ್ನು ತಪ್ಪಿಸಲು ನಿಡಿ-2 ರ ದಾಖಲೆಯನ್ನು ಸೃಷ್ಠಿ ಮಾಡಲಾಗಿದೆ ಎನ್ನುವುದು ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ವಾದಿಗೆ ಪಾಲು ಕೊಡಬಾರದು ಎಂಬ ದುರುದ್ದೇಶದಿಂದ 1 ನೇ ಪ್ರತಿವಾದಿಯೊಂದಿಗೆ ಶಾಮಿಲಾಗಿ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ, ನಿಡಿ-1 ಮತ್ತು 2 ರ ದಾಖಲೆಗಳನ್ನು ಸೃಷ್ಠಿ ಮಾಡಿ ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**